**ದಿನಾಂಕಃ 10-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಃ ಶ್ರೀ ಎಸ್.ಆರ್.ಹೆಚ್. ವಕೀಲರ ಪರವಾಗಿ ಶ್ರೀಮತಿ ಕೆ.ಜಿ.ಕೆ., ವಾದಿಯರ ಪರ ವಕೀಲರಿಂದಃ**

ಈ ಪ್ರಕರಣದಲ್ಲಿ ನಾನು 10 ನೇ ವಾದಿಯ ಮೋಕ್ತಿಯಾರನಾಮೆಯ ಸಾಕ್ಷಿದಾರನಾಗಿದ್ದು, ಈ ದಿನ ನಾನು ನ್ಯಾಯಾಲಯದಲ್ಲಿ ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿವೆ ಹಾಗೂ ಅದರಲ್ಲಿರುವ ಸಹಿಗಳು ನನ್ನವೇ ಆಗಿರುತ್ತವೆ.

ಈ ದಾವೆಯಲ್ಲಿ ಹಾಜರುಪಡಿಸಿದ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ.

ನನ್ನ ತಾಯಿ ಸೋಮಕ್ಕ ನನ್ನ ಹೆಸರಿಗೆ ಬರೆದುಕೊಟ್ಟಿರುವ ಸಾಮಾನ್ಯ ಅಧಿಕಾರ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು, ಸಿಟಿಎಸ್ ನಂಬರ 405/ಎ ಸಂಬಂಧಿಸಿದ ಪ್ರಾಪರ್ಟಿ ರಜಿಸ್ಟರ ಕಾರ್ಡನ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ-2 ಎಂದು, ಅಸಲುದಾವಾ ಸಂಖ್ಯೆ 122/2001 ರ ತೀರ್ಪಿನ ದೃಢೀಕೃತ ನಕಲನ್ನು ನಿಪಿ-3 ಎಂದು, ಆರ್.ಎ. ನಂಬರ 30/2011 ರ ತೀರ್ಪಿನ ದೃಢೀಕೃತ ನಕಲನ್ನು ನಿಪಿ-4 ಎಂದು ಗುರುತಿಸಲಾಯಿತು.

(ಮುಂದುವರೆದ ಮುಖ್ಯ ವಿಚಾರಣೆಗೆ ವಾದಿಯ ಪರ ವಕೀಲರು ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲು ಯಾವುದೇ ಸೂಕ್ತ ಕಾರಣ ಇಲ್ಲದೇ ಇರುವುದರಿಂದ ಕೋರಿಕೆಯನ್ನು ತೀರಸ್ಕರಿಸಲಾಯಿತು.

1 ರಿಂದ 6 ನೇ ಪ್ರತಿವಾದಿಯರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.